# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು – ೫೬೦ ೦೦೧

ಫೋನ್ : ಕಛೇರಿ: 080-22341391
ಆಡಳಿತಾಧಿಕಾರಿ: 080-22879617
ಸಹಾಯಕ ಕುಲಸಚಿವರು/ಲೆಕ್ಕಾಧಿಕಾರಿ: 080-22343398
ಫ್ಯಾಕ್ಸ್ : 080-22341393 / 92

ಇಮೇಲ್-ಕಛೇರಿ: ksche.bangalore@gmail.com
ನಿರ್ದೇಶಕರು: edkshec@yahoo.com
ವೆಬ್‌ಸೈಟ್: www.kshec.co.in

ಸಂ.ಕರಾಉಶಿಪ/1ನೇ ರೂಸಾ TSG ಸಭೆ/2015-16 /256 ದಿನಾಂಕ: 09.07.2015

ಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ರೂಸಾ ತಾಂತ್ರಿಕ ಸಹಾಯ ಗುಂಪಿನ ಎಲ್ಲಾ ನೋಡಲ್ ಅಧಿಕಾರಿಗಳಿಗೆ.

ಮಾನ್ಯರೇ,

ವಿಷಯ: ದಿನಾಂಕ: 06.07.2015 ರಂದು ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 1ನೇ ರೂಸಾ ರಾಜ್ಯ ತಾಂತ್ರಿಕ ಸಹಾಯ ಗುಂಪಿನ (TSG) ಸಭೆಯ ನಡಾವಳಿಗಳು.

ದಿನಾಂಕ: 06.07.2015 ರಂದು ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 1ನೇ ರೂಸಾ ರಾಜ್ಯ ತಾಂತ್ರಿಕ ಸಹಾಯ ಗುಂಪಿನ (TSG) ಸಭೆಯ ನಡಾವಳಿಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
9-7-15
(ಡಾ.ಎಸ್.ಎ.ಕೋರಿ)
ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿ:
1) ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು, 3ನೇ ಮಹಡಿ, ಕೊಠಡಿ ಸಂಖ್ಯೆ.314, ವಿಧಾನಸೌಧ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು, ಮಾಹಿತಿಗಾಗಿ.
2) ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು, ಮಾಹಿತಿಗಾಗಿ.
3) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು, ಮಾಹಿತಿಗಾಗಿ.
4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು, ಮಾಹಿತಿಗಾಗಿ
5) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು, ಮಾಹಿತಿಗಾಗಿ.
6) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮಾಹಿತಿಗಾಗಿ.
7) ಕುಲಸಚಿವರು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
8) ಕಛೇರಿ ಪ್ರತಿ.

**ದಿನಾಂಕ 06.07.2015 ರಂದು ಮಧ್ಯಾಹ್ನ 3.00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಜರುಗಿದ ರೂಸಾದ ತಾಂತ್ರಿಕ ಸಹಾಯ ಗುಂಪಿನ (TSG) ಪ್ರಥಮ ಸಭೆಯ ನಡವಳಿಗಳು**

**ಉಪಸ್ಥಿತರು**

| ಕ್ರಮ.ಸಂಖ್ಯೆ | ಹೆಸರು |
|---|---|
| 1 | ಡಾ.ಎಸ್.ಎ.ಕೋರಿ<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್<br>ಬೆಂಗಳೂರು |
| 2 | ಪ್ರೊ.ಹೆಚ್.ಎನ್.ರಮೇಶ್<br>ಪಿಎಂಇಬಿ ನಿರ್ದೇಶಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 3 | ಶ್ರೀ.ಕೆ.ಸಿ.ಪ್ರಶಾಂತ<br>ರೂಸಾ ನೋಡಲ್ ಅಧಿಕಾರಿ, ವಿಜಯನಗರ ಶ್ರೀ.ಕೃಷ್ಣ ದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ |
| 4 | ಪ್ರೊ.ಬಾಜ ಪೂಜಾರಿ<br>ರೂಸಾ ನೋಡಲ್ ಅಧಿಕಾರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು |
| 5 | ಪ್ರೊ. ಪ್ರದೀಪ್.ಬಿ.ಎಸ್.<br>ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ |
| 6 | ಶ್ರೀ. ಸಂತೋಷ್ ನಾಯಕ್.ಜೆ<br>ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ |
| 7 | ಪ್ರೊ. ಎಸ್.ರವಿ<br>ನಿರ್ದೇಶಕರು, ಪಿಎಂಇಬಿ |
| 8 | ಪ್ರೊ.ಪಿ.ಜಿ.ತಡಸದ್<br>ನೋಡಲ್ ಅಧಿಕಾರಿ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ |
| 9 | ಡಾ.ಕೆ.ಪ್ರೇಮ್ ಕುಮಾರ್<br>ರೂಸಾ ನೋಡಲ್ ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಲಯ, ಗೋಟಗೋಡಿ |
| 10 | ಶ್ರೀ. ಶೋಭನ್ ಕುಮಾರ್ ಡಿ.ಎಂ.<br>ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು |
| 11 | ಶ್ರೀ.ಎಲ್ಲಮ್ಮ<br>ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು |
| 12 | ಶ್ರೀ.ಸರಿತೋಷ್ ದಾಸಂ<br>ನೋಡಲ್ ಅಧಿಕಾರಿ<br>ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು |
| 13 | ಡಾ.ಎಸ್.ಕೆ.ನರಸಿಂಹಮೂರ್ತಿ<br>ರೂಸಾ ನೋಡಲ್ ಅಧಿಕಾರಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ |
| 14 | ಶ್ರೀ.ರಾಜೇಶ್. ಶಣೈ<br>ನೋಡಲ್ ಅಧಿಕಾರಿ, ತುಮಕೂರು ವಿಶ್ವವಿದ್ಯಾಲಯ, ತುಮಕೂರು |
| 15 | ಪ್ರೊ. ಗೋಪಾಲ್ ರಾವ್<br>ಉಪ ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು |
| 16 | ಪ್ರೊ. ಯು.ಎಸ್.ಮೂರ್ತಿ<br>ಡೀನ್ (FA) & ನೋಡಲ್ ಅಧಿಕಾರಿಗಳು |
| 17 | ಪ್ರೊ. ನರಸಿಂಹ ಐಯಾಚಿತ್<br>ಡೀನ್, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ |
| 18 | ಪ್ರೊ. ವಿಷ್ಣುಕಾಂತ್ ಎಸ್.ಚಟ್‌ಪಲ್ಲಿ<br>ಪ್ರಾಧ್ಯಾಪಕರು, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ |
| 19 | ಪ್ರೊ. ಸಂತೋಷ್ ದೇಶಪಾಂಡೆ<br>ಪ್ರಾಧ್ಯಾಪಕರು, ಸಿ.ಎಸ್.ಇ. ಇಲಾಖೆ |
| 20 | ಪ್ರೊ.ವೈ.ಸಿದ್ದೇಗೌಡ<br>ಕುಲಸಚಿವರು, ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, |

| | |
|---|---|
| | ಮೈಸೂರು |
| 21 | ಡಾ.ಐ.ಎಂ.ಖಾಜಿ<br>ನಿರ್ದೇಶಕರು, ಪಿಎಂಇಬಿ |
| 22 | ಶ್ರೀ.ಆರ್.ಮಂಜುನಾಥ್<br>ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು |
| 23 | ಶ್ರೀ..ಡಿ.ಹೆಚ್. ಜಗದೀಶ್<br>ಡೆವಲಪ್‌ಮೆಂಟ್ ಅಧಿಕಾರಿಗಳು |
| 24 | ಶ್ರೀ.ಸತೀಶ್ ಆರ್. ಹುದ್ದಾರ್<br>ಉಪ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು |
| 25 | ಶ್ರೀ.ಎಲ್.ಎಸ್.ಎಮೇಶ್<br>ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ |
| 26 | ಪ್ರೊ.ಗಾಯತ್ರಿ.ಕೆ.ಎಸ್.<br>ನೋಡಲ್ ಅಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ |
| 27 | ಡಾ.ತೇಜಸ್ವಿನಿ<br>ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ |

## ಸಭೆಯ ನಡಾವಳಿಗಳು

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಆಶ್ರಯದಲ್ಲಿ ರೂಸಾ (RUSA) ಗೆ ಸಂಬಂಧಿಸಿದಂತೆ ದಿ:06.07.2015 ರ ಮಧ್ಯಾಹ್ನ 3.00 ಘಂಟೆಗೆ ರಾಜ್ಯ ತಾಂತ್ರಿಕ ಸಹಾಯ ಗುಂಪಿನ (Technical Support Group-TSG) ಸಭೆಯನ್ನು ಕರೆಯಲಾಗಿತ್ತು. ಸಭೆಗೆ ಹಾಜರಾಗಿದ್ದ ವಿವಿಧ ವಿಶ್ವವಿದ್ಯಾಲಯಗಳ ರೂಸಾ ನೋಡಲ್ ಅಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ರೂಸಾ ನೋಡಲ್ ಅಧಿಕಾರಿಗಳನ್ನು ಸಭೆಯ ಪ್ರಾರಂಭದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ, ಕಾರ್ಯನಿರ್ವಾಹಕ ನಿರ್ದೇಶಕರು ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆಯ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಂಡರು.

**ವಿಷಯ 1:** ನವದೆಹಲಿಯಲ್ಲಿ ದಿ:27.03.2015 ರಂದು ನಡೆದ ರೂಸಾದ 6 ನೇ ಪಿಎಬಿ (PAB) ಸಭೆಯಲ್ಲಿ ಕರ್ನಾಟಕ ರಾಜ್ಯಕ್ಕೆ 2015-16ನೇ ಸಾಲಿಗೆ ರೂ.110 ಕೋಟಿಗಳ ಅನುದಾನ ದೊರೆತಿದೆ. ರಾಜ್ಯದ 5 ವಿಶ್ವವಿದ್ಯಾಲಯಗಳಿಗೆ ಕಾಂಪೋನೆಂಟ್ 3ರಡಿ ರೂ.50 ಕೋಟಿ ಹಾಗೂ 60 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಾಂಪೋನೆಂಟ್ 7ರಡಿ ರೂ.60 ಕೋಟಿ ನೀಡಲಾಗಿದೆ. ಆಯ್ಕೆಯಾದ ವಿಶ್ವವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳು ನ್ಯಾಕ್‌ನಿಂದ (NAAC) 'A' ಅಥವಾ 'B' ದರ್ಜೆಯ ಮಾನ್ಯತೆಯನ್ನು ಪಡೆದಿರುತ್ತವೆ. ಸದ್ಯದಲ್ಲೇ ಇತ್ತೀಚಿಗೆ ನ್ಯಾಕ್ ಮಾನ್ಯತೆ ಪಡೆದ 20 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಹಾಗೂ ಅನುದಾನಿತ ಕಾಲೇಜುಗಳ ಪ್ರಸ್ತಾವನೆಗಳನ್ನು ಸಲ್ಲಿಸಲಾಗುವುದು ಎಂದು ತಿಳಿಸಿದರು.

**ವಿಷಯ 2:** ಮುಂಬರುವ ದಿನಗಳಲ್ಲಿ ಯಾವುದೇ ವಿಶ್ವವಿದ್ಯಾಲಯ ಅಥವಾ ಮಹಾವಿದ್ಯಾಲಯ ನ್ಯಾಕ್‌ನಿಂದ 'A' ಅಥವಾ 'B' ದರ್ಜೆಯ ಮಾನ್ಯತೆಯನ್ನು ಪಡೆದರೆ ಆ ಸಂಸ್ಥೆಗಳನ್ನು ರೂಸಾದ ಕಾಂಪೋನೆಂಟ್ 3 ಹಾಗೂ 7 ರಡಿ ಕ್ರಮವಾಗಿ ಪರಿಗಣಿಸಿ ಅವರಿಗೂ ಅನುದಾನದ ಅವಕಾಶ ದೊರೆಯಲಿದೆ ಎಂದು ತಿಳಿಸಿದರು.

**ವಿಷಯ 3:** ರೂಸಾದ 18 ಕಾಂಪೋನೆಂಟ್‌ಗಳ ಕುರಿತು ಮಾಹಿತಿ ನೀಡಿದ ಕಾರ್ಯನಿರ್ವಾಹಕ ನಿರ್ದೇಶಕರು ಕಾಂಪೋನೆಂಟ್ 3 ಹಾಗೂ 7 ನ್ನು ಹೊರತುಪಡಿಸಿ, ಉಳಿದ ಹಾಗೂ ತಮಗೆ ಅನ್ವಯವಾಗುವ ಕಾಂಪೋನೆಂಟ್‌ಗಳಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಜುಲೈ 21 ರೊಳಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಲು ಸೂಚಿಸಿದರು. ಕಾಂಪೋನೆಂಟ್ 6 ಹಾಗೂ 17 ರಡಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪ್ರಸ್ತಾವನೆಗಳನ್ನು ಸಲ್ಲಿಸಲು ಹೇಳಿದರು.

**ವಿಷಯ 4:** ರೂಸಾಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ Portal ನಲ್ಲಿ ಈಗಾಗಲೇ ಅಪ್‌ಲೋಡ್ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು ಈ ವೆಬ್‌ಸೈಟ್ ವಿಳಾಸವನ್ನು ನೀಡಲಾಯಿತು.

164.100.133.129:81/he    www.kshec.ac.in

**ಸಭೆಯ ಸಂದರ್ಭದಲ್ಲಿ ಜರುಗಿದ ಚರ್ಚೆಯ ಸಾರಾಂಶ:**

ಕಾಂಪೋನೆಂಟ್ 3 ಹಾಗೂ 7 ಕ್ಕೆ ಸಂಬಂಧಿಸಿದಂತೆ ಕೇವಲ ನ್ಯಾಕ್‌ನಿಂದ 'A' ಅಥವಾ 'B' ದರ್ಜೆಯ ಮಾನ್ಯತೆ ಇರುವ ಸಂಸ್ಥೆಗಳಿಗೆ ಮಾತ್ರ ಅನುದಾನಕ್ಕೆ ಅವಕಾಶವಿದ್ದು, ಇತ್ತೀಚಿಗೆ ಸ್ಥಾಪಿತವಾದ ಹಾಗೂ ಮೂಲಭೂತ ಸೌಕರ್ಯಗಳ ತೀವ್ರ ಕೊರತೆಯನ್ನು ಅನುಭವಿಸುತ್ತಿರುವ ಸಂಸ್ಥೆಗಳು ಅನುದಾನದಿಂದ ವಂಚಿತವಾಗುತ್ತಿವೆ. ಇಂಥ ಕೆಲವು ಹೊಸ ವಿಶ್ವವಿದ್ಯಾಲಯಗಳು 2F ಹಾಗೂ 12B ಮಾನ್ಯತೆಯನ್ನು ಪಡೆಯದೇ ಇರುವುದರಿಂದ ಅವುಗಳಿಗೆ ಯುಜಿಸಿಯಿಂದಲೂ ಅನುದಾನ ದೊರೆಯುತ್ತಿಲ್ಲ. ಆದ್ದರಿಂದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಈ ನಿಟ್ಟಿನಲ್ಲಿ ಕೇಂದ್ರ ರೂಸಾ ಸಮಿತಿಗೆ ನ್ಯಾಕ್ ಮಾನ್ಯತೆ ಇಲ್ಲದ ಸಂಸ್ಥೆಗಳನ್ನು ಅನುದಾನಕ್ಕೆ ಪರಿಗಣಿಸಲು ಮನವಿ ಸಲ್ಲಿಸಲು ಹಲವು ಸಂಸ್ಥೆಗಳ ರೂಸಾ ನೋಡಲ್ ಅಧಿಕಾರಿಗಳು ವಿನಂತಿಸಿದರು.

9.7.2015

(ಡಾ.ಎಸ್.ಎ.ಕೋರಿ)
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು